ನಗರ ಬಸ್ ನಿಲ್ದಾಣದಲ್ಲಿ ಕಳ್ಳತನ ಹೆಚ್ಚುತ್ತಿರುವುದು.

4236(4304) ಶ್ರೀ ಕೆ.ಎಸ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಕಳ್ಳತನ, ಸರಗಳ್ಳತನ ಇತ್ಯಾದಿ ಅಪರಾಧಗಳು ಹೆಚ್ಚುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಇಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಮಲ್ಲಿಕಾರ್ಜುನ (ಗೃಹ ಸಚಿವರು) :—

ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ನಡೆದ ವಿವಿಧ ಅಪರಾಧಗಳು ಈ ಕೆಳಕಂಡಂತಿವೆ.

ವರ್ಷ	1998	1999	2000 (25-10-2000)
1. ಸರಗಳ್ಳನ	1	-	-
2. ಮೋಟಾರು ವಾಹನ ಕಳವು	9	10	4
3. ಬೇಬು ಕಳವು	107	45	24
4. ಇತರೆ ಕಳವು	150	104	86
ಒಟ್ಟು	267	159	114

ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಲಾಗಿ ಇತ್ತೀಚಿನ ವರ್ಷಗಳಲ್ಲಿ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ವಿವಿಧ ಅಪರಾಧಗಳು ಕಡಿಮೆಯಾಗಿರುವುದೇ ವಿನಃ ಹೆಚ್ಚುತ್ತಿಲ್ಲ.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಅಪರಾಧಗಳನ್ನು ತಡೆಗಟ್ಟಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗಿದೆ.

1. ಬೆಂಗಳೂರು ನಗರದಲ್ಲಿರುವ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪ್ರತಿ ನಿತ್ಯ ಸುಮಾರು 6 ರಿಂದ 7 ಲಕ್ಷದಷ್ಟು ಜನಗಳ ಓಡಾಟವಿದ್ದು, ಸಮೀಪದಲ್ಲೇ ರೈಲ್ವೇ ನಿಲ್ದಾಣವಿರುವುದರಿಂದ ಪ್ರತಿನಿತ್ಯ ಪೊಲೀಸ್ ಸಿಬ್ಬಂದಿಯನ್ನು ಹಗಲು ಮತ್ತು ರಾತ್ರಿ ಸತತವಾಗಿ ಗಸ್ತಿಗೆ ನೇಮಿಸುವ ವ್ಯವಸ್ಥೆ ಮಾಡಲಾಗಿದೆ.

2. ಪೊಲೀಸ್ ಹೊರ ಠಾಣೆಯ ಸಿಬ್ಬಂದಿಯ ಜೊತೆಗೆ ಹೆಚ್ಚುವರಿ ಸಿಬ್ಬಂದಿಯನ್ನು ಗಸ್ತಿಗೆ ನೇಮಿಸಿಕೊಂಡು ಗಸ್ತನ್ನು ಚುರುಕುಗೊಳಿಸಲಾಗುತ್ತಿದೆ. ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಎಚ್ಚರ ವಹಿಸುವಂತೆ ಸತತವಾಗಿ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯವರ ಮತಿಯಿಂದ ಧ್ವನಿವರ್ಧಕಗಳ ಮೂಲಕ ಎಚ್ಚರಿಗೆ ನೀಡಲಾಗುತ್ತಿದೆ.

3. ಬಸ್ ನಿಲ್ದಾಣಗಳಲ್ಲಿ ಸೂಟ್‌ಕೇಸ್ ಕಳ್ಳರು, ಜೇಬುಕಳ್ಳರುಗಳ ಭಾವ ಚಿತ್ರಗಳಿರುವಂತಹ ಬೋರ್ಡ್‌ಗಳನ್ನು ಅಲ್ಲಲ್ಲಿ ಪ್ರದರ್ಶಿಸಲಾಗಿದೆ.

4. ಬಸ್ ನಿಲ್ದಾಣದಲ್ಲಿ ಸಾರ್ವಜನಿಕರ ಸಹಾಯಕ್ಕಾಗಿ ಪೊಲೀಸ್ ಚೌಕಿಯನ್ನು ಪ್ರಾರಂಭಿಸಿದ್ದು, ಅಲ್ಲಿ ಸತತವಾಗಿ 24 ಘಂಟೆಗಳ ಕಾಲ ಪೊಲೀಸ್ ಸಿಬ್ಬಂದಿಯನ್ನು ನೇಮಿಸಿದ್ದು, ಅಲ್ಲಿನ ಸಿಬ್ಬಂದಿಯವರು ಸಾರ್ವಜನಿಕರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿರುತ್ತಾರೆ.

5. ಎಂ.ಓ. ಅಪರಾಧಿಗಳನ್ನು ಮತ್ತು ಸಂಶಯಾಸ್ಪದ ವ್ಯಕ್ತಿಗಳ ಮೇಲೆ ಸೂಕ್ತನಿಗಾ ಇಡುವಂತೆ ವ್ಯವಸ್ಥೆ ಮಾಡಲಾಗಿದೆ.

ಅ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಹೊರ ರಾಜ್ಯಗಳಿಗೆ ಓಡಿಸುತ್ತಿರುವ ಬಸ್ಸುಗಳ ಸಂಖ್ಯೆ.

4237(4305) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊರ ರಾಜ್ಯಗಳಿಗೆ ಹೋಗುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು; (ರಾಜ್ಯವಾರು ವಿವರಗಳೆಷ್ಟು)

ಆ) ಇದರಿಂದ ಇಲಾಖೆಗೆ ಬರುತ್ತಿರುವ ಆದಾಯವೇನು; (ರಾಜ್ಯವಾರು ವಿವರ ನೀಡುವುದು)

ಇ) ಪ್ರಸ್ತುತ ಸಾಲಿನಲ್ಲಿ ಹೊರ ರಾಜ್ಯಗಳಿಗೆ ಇನ್ನಷ್ಟು ಬಸ್‌ಗಳನ್ನು ಹೊಸದಾಗಿ ಆರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—